

# ಶಂಖ, ಚಿಪ್ಪು ಆಭರಣ ಟ್ರೆಂಡ್

ಸಮುದ್ರ ದಡದಲ್ಲಿ ಸಿಗುವ ಕಪ್ಪೆ ಚಿಪ್ಪು, ಶಂಖ, ಮುತ್ತಿನ ಚಿಪ್ಪುಗಳ ಆಭರಣ ಇದೀಗ ಫ್ಯಾಷನ್ ಟ್ರೆಂಡ್ ಆಗಿದೆ. ಆದರೆ ಚಿಪ್ಪುಗಳ ಆಭರಣಗಳನ್ನು ಮೀನುಗಾರ ಮಹಿಳೆಯರು ಬಹಳ ಹಿಂದಿನಿಂದಲೂ ಧರಿಸುತ್ತಿದ್ದರು. ಇದೇ ಶಂಖ, ಚಿಪ್ಪುಗಳಿಗೆ ವಿವಿಧ ವಿನ್ಯಾಸಗಳ, ಬಣ್ಣ, ಆಕಾರಗಳ ಟಚ್ ಕೊಟ್ಟು ಧರಿಸಿ ಇಂದಿನ ಯುವತಿಯರು ಫ್ಯಾಷನ್ ಜಗತ್ತಿನಲ್ಲಿ ಮಿಂಚುತ್ತಿದ್ದಾರೆ.

■ ಆಶಾ ಎಸ್. ಕುಲಕರ್ಣಿ

ಸೂರ್ಯಾಸ್ತದ ಸಮಯದಲ್ಲಿ ಸಮುದ್ರ ತೀರಕ್ಕೆ ಹೋಗಲು ಯಾರಿಗೆ ಇಷ್ಟವಾಗುವುದಿಲ್ಲ ಹೇಳಿ. ಕಡಲ ತೀರದಲ್ಲಿ ನೀರಿನ ಜೊತೆಗೆ ಹರಿದು ಬರುವ ಕಪ್ಪೆ ಚಿಪ್ಪುಗಳನ್ನು ಹೆಕ್ಕಿಕೊಳ್ಳುತ್ತಿರುವ ಪ್ರವಾಸಿಗರನ್ನು ನೀವು ನೋಡೇ ಇರುತ್ತೀರಾ. ಇದೀಗ ಈ ಕಪ್ಪೆ ಚಿಪ್ಪುಗಳನ್ನೇ ಬಳಸಿಕೊಂಡು ಫ್ಯಾಷನ್ ಲೋಕವೇ ಸೃಷ್ಟಿಯಾಗಿದೆ. ಯುವತಿಯರು ಇಷ್ಟಪಟ್ಟು ಇದನ್ನು ಧರಿಸಿ ಫ್ಯಾಷನ್ ಲೋಕದಲ್ಲಿ ಸಖತ್ತಾಗಿ ಮಿಂಚುತ್ತಿದ್ದಾರೆ.

ಇದೀಗ ನಮ್ಮ ಫ್ಯಾಷನ್ ಒಡವೆ ತಯಾರಕರು ಈ ಸೀಶೆಲ್‌ಗಳಿಂದ ಹಲವಾರು ತರಹದ ವಸ್ತುಗಳನ್ನು ತಯಾರಿಸಿ ಮಾರುಕಟ್ಟೆಗೆ ತಂದಿದ್ದಾರೆ. ಇದೀಗ ಈ ಸೀಶೆಲ್‌ಗಳು ಕೇವಲ ಆಭರಣಗಳಷ್ಟಕ್ಕೇ ಸೀಮಿತವಾಗಿರದೇ ದಿನ ಬಳಕೆಯ ಆಕ್ಸೆಸ್ಸರಿಗಳಾದ ಬ್ಯಾಗುಗಳು, ಕೀ ಚೈನುಗಳು, ಚಪ್ಪಲಿಗಳು, ದುಪಟ್ಟಾಗಳು ಮತ್ತು ಅಲಂಕಾರಿಕ ವಸ್ತುಗಳ ತಯಾರಿಕೆಗೂ ಬಳಸಲ್ಪಡುತ್ತಿವೆ.

ಹಾಗೆ ನೋಡಿದರೆ ಸಮುದ್ರ ತಟದಲ್ಲಿ ದೊರೆಯುವ ವಿವಿಧ ಆಕಾರಗಳುಳ್ಳ ಚಿಪ್ಪುಗಳಿಂದ ಆಭರಣ ತಯಾರಿಸಿ ಧರಿಸುವ ಫ್ಯಾಷನ್ ಇಂದು ನಿನ್ನೆಯದಲ್ಲ. ಸಾಕಷ್ಟು ಹಿಂದಿನ ಕಾಲದಿಂದಲೂ ಇದು ರೂಢಿಯಲ್ಲಿದೆ. ಹಿಂದೆ ಕಡಲ ತೀರದಲ್ಲಿ ವಾಸಿಸುತ್ತಿದ್ದ ಮೀನುಗಾರರು ಕಡಲಲ್ಲಿ ದೊರೆಯುತ್ತಿದ್ದ ವಿವಿಧ ರೀತಿಯ ಕಪ್ಪೆ ಚಿಪ್ಪುಗಳನ್ನು, ಮುತ್ತುಗಳನ್ನು ಬಳಸಿಕೊಂಡು ತಮ್ಮ ಇಷ್ಟಾನುಸಾರವಾಗಿ ಆಭರಣಗಳನ್ನು ತಯಾರಿಸಿಕೊಂಡು ಕತ್ತಿಗೆ, ಕೈಗೆ ಧರಿಸಿದುದನ್ನು ನಾವು ನೋಡಿದ್ದೇವೆ. ಇದೀಗ ಈ ಆಭರಣಗಳೇ ಟ್ರೆಂಡಿ